# ಕನ್ನಡಕ್ಕಾಗಿ ಬಾಳಿದ ಚಳುವಳಿಗಾರ: ತಮ್ಮಣ್ಣಪ್ಪ ಚಿಕ್ಕೋಡಿಯವರು

ರತ್ನಾ ಪಾಟೀಲ
ಉಪನ್ಯಾಸಕರು, ಎಸ್.ಟಿ. ಸಿ ಮಹಾವಿದ್ಯಾಲಯ, ಬನಹಟ್ಟಿ.

DOI: https://doi.org/10.5281/zenodo.17297605

## ABSTRACT:

ತಮ್ಮಣ್ಣಪ್ಪನಂತವರು ಕನ್ನಡ ಕೆಲಸಕ್ಕಾಗಿ ಟಂಕ ಕಟ್ಟಿ ನಿಲ್ಲದೆ ಇದ್ದರೆ ಉತ್ತರ ಕರ್ನಾಟಕ ಸಂಪೂರ್ಣ ಮರಾಠಿಮಯವಾಗುತ್ತಿತ್ತು, ಅದರಲ್ಲೂ ಜಮಖಂಡಿ, ಮುಧೋಳ್, ಸಾಂಗ್ಲಿ ಸಂಸ್ಥಾನಗಳಲ್ಲಿ ಕನ್ನಡದ ಅಸ್ತಿತ್ವವೇ ಇಲ್ಲದಂತಾಗುತ್ತಿತ್ತು. ಉತ್ತರ ಕರ್ನಾಟಕದಲ್ಲಿ ಮರಾಠಿ ದಬ್ಬಾಳಿಕೆಯನ್ನು ಕಂಡು ತಮ್ಮಣ್ಣಪ್ಪನವರು ತತ್ತರಿಸಿ ಹೋದರು. ಕನ್ನಡದ ದುಃಸ್ಥಿತಿಯನ್ನು ಕಂಡು ಅದರ ಉಳಿವಿಗಾಗಿ ಟಂಕ ಕಟ್ಟಿ ನಿಂತರು. ಕೇವಲ ಮುಲ್ಕಿ ಪರೀಕ್ಷೆಯನ್ನು ಪಾಸು ಮಾಡಿದ್ದರು. ತಮ್ಮಣ್ಣಪ್ಪನವರು ಬಹಳ ಬುದ್ಧಿವಂತರು, ಜ್ಞಾನದಾಹಿಗಳು, ಸಮಾಜೋಭಿವೃದ್ಧಿಗಾಗಿ ಹಂಬಲಿಸಿದವರು. ಕನ್ನಡ ನಾಡು ನುಡಿ ಸಂಸ್ಕೃತಿಯ ಏಳಿಗೆಗಾಗಿ ನಾಡಿನ ಹಲವಾರು ಗಣ್ಯರೊಡನೆ ಕೂಡಿ ಸಂಘ ಸಂಸ್ಥೆಗಳನ್ನು ಹುಟ್ಟುಹಾಕಿದರಲ್ಲದೆ ಸಕ್ರಿಯವಾಗಿ ಪಾಲ್ಗೊಂಡು ಹತ್ತು ಹಲವಾರು ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರಲು ಇಡೀ ತಮ್ಮ ಬದುಕನ್ನು ಸವಿಸಿದವರು. ಗಡಿನಾಡಿನ ಕನ್ನಡದ ಹುಲಿ ಎಂದು ಕೀರ್ತಿ ಗಳಿಸಿದರು.

## KEYWORDS:

ಭಾಷೆ, ಸಂಸ್ಕೃತಿ, ಶಿಕ್ಷಣ, ಹೋರಾಟ, ಸಂಘಟನೆ

ಪ್ರಾಚೀನ ಪರಂಪರೆಯನ್ನು ಹೊಂದಿದ ಕನ್ನಡ ನಾಡು ಮಧ್ಯಕಾಲದಲ್ಲಿ ಅನ್ಯ ಭಾಷೆ ಸಂಸ್ಕೃತಿಯ ಪ್ರಭಾವಕ್ಕೊಳಗಾಯಿತು. 16-18 ನೇ ಶತಮಾನದಲ್ಲಿ ಮೊದಲಗೊಂಡ ಮರಾಠರು, ಪೇಶ್ವೆಯವರು ಕರ್ನಾಟಕದ ಆಡಳಿತವನ್ನು ಕೈಗೆತ್ತಿಕೊಂಡು ತಮ್ಮ ಪ್ರಭಾವವನ್ನು ದಟ್ಟವಾಗಿ ಬೇರೂರಿದರು. ಅವರ ಕಾಲದ ಸಂಸ್ಥಾನಿಕರು ಆಡಳಿತ ಕರ್ನಾಟಕಕ್ಕೆ ಎಂತಹ ಅಪಾಯಕಾರಿ ಸ್ಥಿತಿ ತಂದಿತ್ತೆಂದರೆ ಮಾತೃಭಾಷೆ ಕನ್ನಡದ ಬದಲು ಉತ್ತರ ಕರ್ನಾಟಕದಲ್ಲಿ ಮರಾಠಿ ನೆಲೆ ನಿಂತಿತು. ಅನ್ಯ ಭಾಷೆಯ ಜೊತೆಗೆ ಅನ್ಯ ಸಂಸ್ಕೃತಿಗಳಿಂದ ಕನ್ನಡ ನಾಡು ತತ್ತರಿಸಿ ಹೋಗಿತ್ತು. ಉತ್ತರ ಕರ್ನಾಟಕವಂತೂ ಪೇಶ್ವೆಗಳ ಆಡಳಿತ ಭಾಷೆಯಾದ ಮರಾಠಿಯ ಕಾರಣದಿಂದ ದಕ್ಷಿಣ ಮಹಾರಾಷ್ಟ್ರವಾಗಿ ಪರಿವರ್ತನೆ ಆಗುವಷ್ಟರ ಮಟ್ಟಿಗೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲಾರಂಭಿಸಿತ್ತು. ಅನ್ಯ ಭಾಷೆ, ಅನ್ಯ ಸಂಸ್ಕೃತಿಗಳ ಪ್ರಭಾವ ಮತ್ತು ಅವುಗಳ ಮೋಹದಿಂದ ಇಲ್ಲಿರುವ ಕನ್ನಡಿಗರು ಮರಾಠಿಯನ್ನು ಒಪ್ಪಿಕೊಂಡು ಬಿಟ್ಟಿದ್ದರು. ದಿನನಿತ್ಯದ ಭಾಷೆ, ಶಿಕ್ಷಣ, ಕಲೆ, ವ್ಯಾಪಾರ – ಮರಾಠಿ ಭಾಷೆ ಸಂಸ್ಕೃತಿ ವಿಸ್ತರಿಸಿಕೊಂಡು ದೈತ್ಯಾಕಾರವಾಗಿ ಬೆಳೆಯಲಾರಂಭಿಸಿದಾಗ ಕನ್ನಡಿಗರು ತಮ್ಮ ನೆಲೆಯಲ್ಲಿಯೇ ಪರದೇಶಿಗಳಂತೆ ಬಾಳಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.

ತಮ್ಮಣ್ಣಪ್ಪನವರದ್ದು ಕನ್ನಡಕ್ಕಾಗಿ ಮುಡಿಪಾದ ಬಾಳು. ರಬಕವಿ ಆಗ ಸಾಂಗ್ಲಿ ಸಂಸ್ಥಾನದಲ್ಲಿತ್ತು. ಬನಹಟ್ಟಿ, ಜಮಖಂಡಿ ಸಂಸ್ಥಾನದ ಒಂದು ಗ್ರಾಮ. ಮರಾಠಿ ಸಂಸ್ಥಾನಿಕರಿಂದ ಆಳಲ್ಪಡುವ ಈ ಗ್ರಾಮಗಳಲ್ಲಿಯೇ ಮರಾಠಿಯದ್ದೇ ಹಾವಳಿ. ಕನ್ನಡದ ಮನೆಯಲ್ಲಿಯೇ ಕನ್ನಡಕ್ಕೆ ಸ್ಥಾನವಿಲ್ಲ. ಕನ್ನಡದ ನೆಲೆಯಲ್ಲಿ ಕನ್ನಡಕ್ಕೆ ನೆಲೆಯಿಲ್ಲ. ಕನ್ನಡಕ್ಕೆ

ದೊರೆಯಬೇಕಾದ ಸ್ಥಾನವನ್ನು ದೊರಕಿಸಲು ಅವರು ಸಂಸ್ಥಾನಿಕರೊಡನೆ ಹೋರಾಡಿದರು, ಸಿಂಹದಂತೆ ಘರ್ಜಿಸಿದರು. ಕನ್ನಡಕ್ಕಾಗಿ ನಡೆಸಿದ ಈ ಹೋರಾಟ ಸಹಜವಾಗಿಯೇ ಸಾಂಗ್ಲಿ, ಜಮಖಂಡಿ ಎರಡು ಸಂಸ್ಥಾನಗಳ ಎಲ್ಲೆಯನ್ನು ಮೀರಿತು. ಆಗ ಕೊಲ್ಲಾಪುರ, ಸಾಂಗ್ಲಿ, ಮಿರಜ, ಕುರುಂದವಾಡ, ಜಮಖಂಡಿ, ಮುಧೋಳ ಮತ್ತು ರಾಮದುರ್ಗ, ಅಕ್ಕಲಕೋಟೆ ಮೊದಲಾದ ಸಂಸ್ಥಾನಗಳಲ್ಲಿ ಮರಾಠಿಗೆ ಅಗ್ರತಾಂಬೂಲ, ಸರ್ವ ಮನ್ನಣೆ. ಹೀಗಾಗಿ ತಮ್ಮಣ್ಣಪ್ಪನವರ ಹೋರಾಟದ ಬಿಸಿ ಆ ಭಾಗಗಳಿಗೂ ವ್ಯಾಪಿಸಿದ್ದು ಅಚ್ಚರಿಯೇನಲ್ಲ.

ತಮ್ಮಣ್ಣಪ್ಪನವರದ್ದು ಅಳುಕದ ಜೀವವಲ್ಲ. ನೋಡಿದ ಕೂಡಲೇ ಭಯಮಿಶ್ರಿತ ಗೌರವ ಮೂಡುವ ವ್ಯಕ್ತಿತ್ವ. ಅವರದ್ದು ಅಜಾನುಬಾಹು ಎತ್ತರ. ದಟ್ಟ ಮೀಸೆ, ತಲೆಯ ಮೇಲೆ ದೊಡ್ಡ ರೂಮಾಲು, ಶುಭ್ರ ಶಾಲು – ಆ ದೇಹದಲ್ಲಿ ಧೈರ್ಯವಾಗಿ ಮುನ್ನುಗ್ಗುವ ಜೀವವಿತ್ತು. ಆಗ ಶಾಲೆಗಳಲೆಲ್ಲ ಮರಾಠಿ ಶಿಕ್ಷಣ. ವ್ಯವಹಾರದ ಲೆಕ್ಕಪತ್ರಗಳೆಲ್ಲ ಮರಾಠಿಯಲ್ಲಿ. ಕೋರ್ಟ್ ಕಚೇರಿಗಳ ವ್ಯವಹಾರವಂತೂ ಸರಿಯೇ. ಆ ಪರಿಸ್ಥಿತಿ ಬದಲಾಯಿಸಲು ಅವರು ಮುಂದಾದರು.

ತಮ್ಮ ಅಂಗಡಿಯ ಲೆಕ್ಕಪತ್ರಗಳನ್ನೇ ಮೊದಲು ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದರು. ಈ ರೀತಿ ಮೇಲ್ಪಂಕ್ತಿ ಹಾಕಿ ಉಳಿದವರಿಗೂ ಕನ್ನಡದಲ್ಲಿಯೇ ಲೆಕ್ಕಪತ್ರ ಬರೆಯುವಂತೆ ಒತ್ತಾಯಿಸಿದರು. ಆಡಳಿತ ಭಾಷೆ ಹಾಗೂ ಶಿಕ್ಷಣ ಮಾಧ್ಯಮವಾದ ಮರಾಠಿಯ ಸ್ಥಾನದಲ್ಲಿ ಕನ್ನಡವನ್ನು ಸ್ಥಾಪಿಸಲು ನಿರಂತರ ಹೋರಾಟದ ಅವಶ್ಯಕತೆ ಉಂಟಾಯಿತು. ಈ ಹೋರಾಟದಲ್ಲಿ ಅವರೆಂದೂ ಹಿಂದೇಟು ಹಾಕಲಿಲ್ಲ. ಸಂಸ್ಥಾನಿಕರೊಡನೆ ನೇರವಾಗಿ ಹೋರಾಡಿದರು. ವಿವಿಧ ಸಂಘ ಸಂಸ್ಥೆಗಳ ಮೂಲಕವೂ ಹೋರಾಡಿದರು. ಯಾವುದೇ ಸಭೆ ಸಮ್ಮೇಳನಗಳಿರಲಿ, ಆ ಅವಕಾಶವನ್ನು ಕನ್ನಡದ ಕಾರ್ಯಕ್ಕಾಗಿ ತಮ್ಮಣ್ಣಪ್ಪನವರು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದರು. 1915 ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮಣ್ಣಪ್ಪನವರು ಮಂಡಿಸಿ ಪಾಸು ಮಾಡಿಸಿದ ಗೊತ್ತುವಳಿಗಳು ಈ ಕೆಳಗಿನಂತಿವೆ:

ದಕ್ಷಿಣ ಹೈದರಾಬಾದ್, ಕೊಲ್ಲಾಪುರ, ಸಾಂಗ್ಲಿ, ಮಿರಜ, ಜಮಖಂಡಿ, ಮುಧೋಳ್, ಕುರುಂದವಾಡ, ಜತ್ತ, ಅಕ್ಕಲಕೋಟೆ ಹಾಗೂ ಸಂಡೂರು ಮೊದಲಾದ ಸಂಸ್ಥಾನಗಳಲ್ಲಿರುವ ಕನ್ನಡಿಗರಿಗೆ ಕನ್ನಡ ನುಡಿಯಲು ಶಿಕ್ಷಣ ಕೊಡಬೇಕಲ್ಲದೆ ಕೋರ್ಟ್ ಕಚೇರಿಗಳಲ್ಲಿ ಕನ್ನಡ ಭಾಷೆಯನ್ನು ಆಡಳಿತಕ್ಕೆ ತರಬೇಕೆಂದು ಆಯಾ ಸಂಸ್ಥಾನ ಅಧಿಕಾರಿಗಳಿಗೆ ಈ ಸಮ್ಮೇಳನವು ಭಿನ್ನವಿಸುತ್ತದೆ.

**1925 ರಲ್ಲಿ ಬೆಳಗಾವಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಇವರು ಪಾಸು ಮಾಡಿದ ಗೊತ್ತುವಳಿಗಳು ಈ ಕೆಳಗಿನಂತಿವೆ:**

ಕರ್ನಾಟಕದಲ್ಲಿ ವಿಶೇಷವಾಗಿ ಬೆಳಗಾವಿ, ಬಿಜಾಪುರ ಜಿಲ್ಲೆಗಳಲ್ಲಿ ಜನರ ಮಾತೃಭಾಷೆ ಕನ್ನಡವಾಗಿದ್ದರೂ ಬೆಳಗಾವಿ ತಾಲೂಕಿನ ತೀರ ಸ್ವಲ್ಪ ಭಾಗವನ್ನು ಬಿಟ್ಟು ಇಡೀ ಜಿಲ್ಲೆಯಲ್ಲಿ ಕನ್ನಡ ಶಾಲೆಗಳಲ್ಲಿ ಶಿಕ್ಷಣವು ನಡೆಯುತ್ತಿದ್ದರೂ, ವರ್ತಕರು ತಮ್ಮ ಲೆಕ್ಕಪತ್ರಗಳನ್ನು, ದಸ್ತಾವೇಜುಗಳನ್ನು ಮರಾಠಿಯಲ್ಲಿಡುವ ಸಂಪ್ರದಾಯವನ್ನು ಇಟ್ಟಿದ್ದು ಆ ಸಮ್ಮೇಳನಕ್ಕೆ ವಿಷಾದಕರವೆನಿಸಿದೆ. ಇವರೆಲ್ಲರೂ ತಮ್ಮ ಲೆಕ್ಕಪತ್ರ ಮೊದಲಾದ ವ್ಯವಹಾರಗಳನ್ನು ಕನ್ನಡದಲ್ಲಿಯೇ ಸಾಗಿಸಬೇಕೆಂದು ಆ ಸಭೆಯು ಆಗ್ರಹಪೂರ್ವಕ ವಿನಂತಿಯನ್ನು ಮಾಡಿಕೊಳ್ಳುತ್ತದೆ.

ಎರಡು ಗೊತ್ತುವಳಿಗಳನ್ನು ಪರಿಶೀಲಿಸಿದಾಗ ತಮ್ಮಣ್ಣಪ್ಪನವರು ಕನ್ನಡಕ್ಕಾಗಿ ಹೋರಾಟ ನಡೆಸಿರುವುದಂತೂ ಸರಿಯೇ, ಅದರೊಡನೆ ಕಾರ್ಯಕ್ಕೆ ಫಲ ದೊರೆಯಹತ್ತಿದ್ದು ಸ್ಪಷ್ಟವಾಗುತ್ತಿದೆ. 1915 ರಲ್ಲಿ ಕನ್ನಡ ಎಲ್ಲಾ ಕಡೆಗೂ ಬರಬೇಕೆಂಬ ಪರಿಸ್ಥಿತಿಯೇ ಇದ್ದರೆ 1925 ರಲ್ಲಿ ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳ ಶಾಲೆಗಳಲ್ಲಿ ಈಗಾಗಲೇ ಕನ್ನಡ ಮಾಧ್ಯಮ ಪ್ರಾರಂಭವಾಗಿದ್ದು, ಮುಂದಿನ ಘಟ್ಟದ ಹೋರಾಟ ಉಳಿದಿತ್ತು – ಲೆಕ್ಕಪತ್ರಗಳನ್ನು ಕನ್ನಡದಲ್ಲಿ ಇಡಬೇಕೆಂದು. ಅದರ ತಾತ್ಪರ್ಯ: ಈ ರೀತಿ ತಮ್ಮ ಹೋರಾಟಕ್ಕೆ ಜಯ ದೊರೆತಂತೆ ಅದನ್ನು ಬೇರೆ ಬೇರೆ ಭಾಗಗಳಿಗೂ ವಿಸ್ತರಿಸಿದರು. ಈಗ ಈ ಸಂಸ್ಥಾನಗಳನ್ನು ದಾಟಿ ನಿಜಾಮನ ಆಡಳಿತದಲ್ಲಿದ್ದ ಕಲಬುರ್ಗಿ, ಬೀದರ್ ಭಾಗದತ್ತ ಅವರ ದೃಷ್ಟಿ ಹರಿಯಿತು.

**1928 ರ ಕಲಬುರ್ಗಿ ಸಮ್ಮೇಳನದಲ್ಲಿ ಮತ್ತೊಂದು ಗೊತ್ತುವಳಿಯನ್ನು ಮಂಡಿಸಿದರು:**

ಕಲಬುರ್ಗಿ ಮತ್ತು ಬೀದರ್ ಜಿಲ್ಲೆಗಳಲ್ಲಿಯ ವರ್ತಕರು, ಸಾರ್ವಜನಿಕ ಸಂಸ್ಥೆಗಳು ಕನ್ನಡ ಭಾಷೆಗೆ ಪ್ರಾಧಾನ್ಯವನ್ನು ಕೊಡಬೇಕೆಂದು, ಲೆಕ್ಕಪತ್ರ ಮುಂತಾದವುಗಳನ್ನೆಲ್ಲ ಕನ್ನಡದಲ್ಲಿ ಇಡಬೇಕೆಂದು ಈ ಸಮ್ಮೇಳನದಲ್ಲಿ ಅವರುಗಳನ್ನು ಪ್ರಾರ್ಥಿಸುತ್ತದೆ.

ತಮ್ಮಣ್ಣಪ್ಪನವರು ಎಡೆಬಿಡದ ಹೋರಾಟದಿಂದ, ದಣಿವರಿಯದ ದುಡಿಮೆಯಿಂದ ಕನ್ನಡಕ್ಕೆ ಅದರ ಸ್ಥಾನ ದೊರೆಯಹತ್ತಿತ್ತು. ಕನ್ನಡಕ್ಕೆ ಅದರ ಸ್ಥಾನವನ್ನು ಕೊಟ್ಟಿದ್ದಕ್ಕಾಗಿ ತಮ್ಮಣ್ಣಪ್ಪನವರ ಅಭಿನಂದನಾ ಗೊತ್ತುವಳಿಯನ್ನು ತಂದಿದ್ದೇ ಇದಕ್ಕೆ ನಿದರ್ಶನ. 1928 ಕಲಬುರ್ಗಿ ಸಮ್ಮೇಳನದಲ್ಲಿ ಇಂಥ ಒಂದು ಗೊತ್ತುವಳಿ ತಂದರು:

ಜಮಖಂಡಿ ಸಂಸ್ಥಾನದ ಅಧಿಪತಿಗಳು ತಮ್ಮ ಸಂಸ್ಥಾನದಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸಿದ್ದಕ್ಕೋಸ್ಕರ ಈ ಸಮ್ಮೇಳನವು ಆ ಅಧಿಪತಿಗಳನ್ನು ಅಭಿನಂದಿಸುತ್ತದೆ.

ಕನ್ನಡ ನೆಲದಲ್ಲಿ ಮರಾಠಿ ದಬ್ಬಾಳಿಕೆಯ ವಿರುದ್ಧ ಅವರು ಕೊನೆಯವರೆಗೂ ಹೋರಾಟ ನಡೆಸಿದರು. ಅವರ ಹೋರಾಟಕ್ಕೆ ಸಕಾಲದಲ್ಲಿ ಸಹಕಾರ ದೊರೆಯಿತು. ಅವರು ಯಶಸ್ವಿಯಾದದ್ದು ಕನ್ನಡದ ಪುಣ್ಯ. ಆದರೆ ತಮ್ಮ ಕಾರ್ಯ ಮುಗಿಯಿತೆಂದು ಅವರು ಭಾವಿಸಲಿಲ್ಲ, ಇನ್ನೂ ಆಗಬೇಕಾದ ಕೆಲಸ ಸಾಕಷ್ಟಿದೆ ಎನ್ನುವ ಕಲ್ಪನೆ ಅವರಿಗಿತ್ತು. ಕನ್ನಡಕ್ಕೆ ಅದರ ಸ್ಥಾನ ಸಿಗಲು ಆರಂಭವಾಗಿದೆ ಅಷ್ಟೇ, ಆದರೆ ಇನ್ನೂ ಹೆಚ್ಚಿನ ಸ್ಥಾನ ಅದಕ್ಕೆ ಸಿಗಬೇಕಾಗಿದೆ. ಅದೇ ಸಮ್ಮೇಳನದಲ್ಲಿ ಅವರು "ಆದರೆ ಈಗಿರುವ ಶಾಲೆಗಳು ಸಾಕಷ್ಟಿಲ್ಲದಿರುವುದರಿಂದ ಆ ಶಾಲೆಗಳನ್ನು ಹೆಚ್ಚಿಸಬೇಕೆಂದು ಈ ಸಮ್ಮೇಳನ ಭಿನ್ನವಿಸುತ್ತದೆ" ಎಂದು ವಿಷಯಗಳನ್ನು ಮಂಡಿಸಿರುವುದು ತಮ್ಮಣ್ಣಪ್ಪನವರ ವಸ್ತುಸ್ಥಿತಿ ಜ್ಞಾನಕ್ಕೆ ಸಾಕ್ಷಿ.

ಕನ್ನಡ ನುಡಿಗಾಗಿ ತಮ್ಮಣ್ಣಪ್ಪನವರ ಹೋರಾಟ ಒಂದು ಕಡೆ ಸಾಗಿದ್ದರೆ, ನಾಡಿಗಾಗಿ ಹೋರಾಟ ಇನ್ನೊಂದೆಡೆ ಸಾಗಿತ್ತು. ಈ ಹೋರಾಟದಲ್ಲಿ ಅವರ ಕಳಕಳಿ ಅಷ್ಟೇ ಅಲ್ಲದೆ ಅವರ ದೂರದೃಷ್ಟಿಯೂ ಪ್ರಕಟವಾಗುತ್ತದೆ. ಅವರು ಯಾವುದೇ ವಿಷಯವನ್ನು ಕೈಗೆತ್ತಿಕೊಂಡರೂ ಅದರ ಬಗೆಗೆ ಸಂಪೂರ್ಣ ಜ್ಞಾನ ಪಡೆದುಕೊಂಡು ಅದರ ಸರ್ವ ಮಗ್ಗುಲುಗಳನ್ನು ಪೂರ್ಣವಾಗಿ ಅರಿತು ಮಾತನಾಡುತ್ತಿದ್ದರು. 1928 ರ ಕಲಬುರ್ಗಿ ಸಾಹಿತ್ಯ ಸಮ್ಮೇಳನದಲ್ಲಿ ಅವರ ಗೊತ್ತುವಳಿಯ ವಿಷಯವು ನಿಚ್ಚಳವಾಗಿ ಪ್ರತಿಬಿಂಬಿಸುತ್ತದೆ.

ಮರಾಠರ ಆಕ್ರಮಣಶೀಲ ವ್ಯಕ್ತಿತ್ವವನ್ನು ಗುರುತಿಸಿ ಅದರ ಬಗೆಗೆ ಸಕಾಲಿಕ ಎಚ್ಚರಿಕೆ ಕೊಟ್ಟು ತಮ್ಮಣ್ಣಪ್ಪನವರು ಕನ್ನಡ ನಾಡು ನುಡಿಗಳ ವಿಷಯವಾಗಿ ಮೈಯೆಲ್ಲಾ ಕಣ್ಣಾಗಿರುತ್ತಿದ್ದರು. ಕರ್ನಾಟಕವೆಂಬ ಹೆಸರನ್ನು ಮಾತ್ರ ಕೇಳಿರದ ಇಂದಿನ ಜನಾಂಗಕ್ಕೆ ಈ ಹೆಸರನ್ನು ಪಡೆಯಲು ನಡೆಸಿದ ಹೋರಾಟ, ಪಟ್ಟ ಕಷ್ಟಗಳ ಅರಿವಾಗದು. ಕನ್ನಡಕ್ಕೆ

ಸ್ಥಾನವಿಲ್ಲದೆ, ಕರ್ನಾಟಕ ಎಂಬ ಹೆಸರು ಕೇಳದ ಅಂದಿನ ಕಾಲದಲ್ಲಿ ಆ ಜನ ಹೋರಾಟ ನಡೆಸಿದರು. ಇಂಥ ಪ್ರಾತಃಸ್ಮರಣೀಯರ ಅವಿರತ ಹೋರಾಟದ ಫಲವಾಗಿಯೇ ನಾವಿಂದು ಕರ್ನಾಟಕವೆಂಬ ಹೆಸರನ್ನು, ಕನ್ನಡ ಭಾಷೆಗೆ ಯೋಗ್ಯ ಸ್ಥಾನವನ್ನು ಪಡೆದುಕೊಂಡಿದ್ದು.

**ಉಪಸಂಹಾರ**

ತಮ್ಮಣ್ಣಪ್ಪನವರು ತಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ನಡೆಯುವ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದರು. ಘಟನೆಗಳ ರಚನಾತ್ಮಕ ವಿಮರ್ಶೆ ಮಾಡುತ್ತಿದ್ದರು. ನಾಡು ನುಡಿಯ ಅಭ್ಯುದಯಕ್ಕಾಗಿ ಹಗಲಿರುಳು ಚಿಂತಿಸುತ್ತಿದ್ದರು. ಹೀಗಾಗಿ ಹೊಸ ವಿಚಾರಗಳನ್ನು ತೆರೆದ ಹೃದಯದಿಂದ ಸ್ವಾಗತಿಸುತ್ತಿದ್ದರು.

ತಮ್ಮ ಸಮಕಾಲೀನ ಪರಿಸರದ ಕೂಸಾಗಿರುವ ಮನುಷ್ಯ ಆ ಪರಿಸರಕ್ಕೆ ಪ್ರತಿಸ್ಪಂದಿಸುತ್ತಾನೆ. ಅಲ್ಲದೆ ಸಮಾಜಮುಖಿಯಾಗುವ ಚಿಂತನೆಗಳನ್ನು ಮಾಡುತ್ತಿದ್ದರು. ಸದಾಕಾಲ ಸಮಾಜದ ಪ್ರಗತಿಯ ಬಗ್ಗೆ ದುಡಿಯುತ್ತಿರುತ್ತಾನೆ. ಇದನ್ನು ತಮ್ಮ ಕುಟುಂಬಕ್ಕಿಂತ ಸಮಾಜವೇ ಮುಖ್ಯವೆಂದು ತಿಳಿದ ಕೆಲವೇ ಜನ ಮಾತ್ರ ದುಡಿಯುತ್ತಾರೆ. ಅಂಥವರಲ್ಲಿ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿಯವರು ಮುಖ್ಯರಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಕುಳ್ಳಿ ಜಯವಂತ., (1980), ತಮ್ಮನಪ್ಪ ಚಿಕ್ಕೋಡಿ
2. ಅಕ್ಕಿ ಉಮಾ ಕೊಟ್ಟಪ್ಪ., ಚಿಕ್ಕೋಡಿ ಕುಟುಂಬ
3. ಕುಳ್ಳಿ ಜಯವಂತ್ ಎಸ್., (2017), ತಮ್ಮನಪ್ಪ ಚಿಕ್ಕೋಡಿ., ಉಷಾ ಪರಿಣಯ

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.